ಸದಸ್ಯರ ಹೆಸರು: ಶ್ರೀ ಆರ್.ಹಂಪನಗೌಡ ಬಾದರ್ಲಿ(ಸಿಂಧನೂರು)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಪ್ರಾಥಮಿಕ 'ಶಿಕ್ಷಣ, ಹಿರಿಯ ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಉತ್ತರ

ಅ) ಇದೆ.

ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 231(572)

ಸದಸ್ಯರ ಹೆಸರು: ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ. ರಾಯಚೂರು ಜಿಲ್ಲೆಯ ಕುಡಿಯುವ ನೀರಿನಲ್ಲಿ ಲವಣ ಮಿಶ್ರಿತ ಮತ್ತು ವಿಷ ಮಿಶ್ರಿತ ಅಂಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ ಎಷ್ಟು ಗ್ರಾಮಗಳಲ್ಲಿ ಲವಣ ಮಿಶ್ರಿತ ನೀರಿದೆ; ಅದರಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳಿವೆ; ಇಂತಹ ನೀರಿರುವ ಗ್ರಾಮಗಳಿಗೆ ಸರ್ಕಾರವು ಶುದ್ಧ ಕುಡಿಯುವ ನೀರನ್ನು ಒದಗಿಸುವ ಉದ್ದೇಶ ಹೊಂದಿದೆಯೆ; ಹಾಗಿದ್ದಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ; ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಗ್ರಾಮಗಳಾವುವು?

ಉತ್ತರ

ಅ. ರಾಯಚೂರು ಜಿಲ್ಲೆಯ ಕೆಲವು ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರು ಅಧಿಕ ಲವಣಾಂಶ / ಅಧಿಕ ಫ್ಲೋರೈಡ್ ಇತ್ಯಾದಿಗಳಿಂದ ರಾಸಾಯನಿಕವಾಗಿ

ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕುಡಿಯುವ ನೀರು ವಿಷ ಮಿಶ್ರಿತವಿರುವುದಿಲ್ಲ.

ಆ. ರಾಯಚೂರು ಜಿಲ್ಲೆಯ 681 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರು ರಾಸಾಯನಿಕವಾಗಿ ಕಲುಷಿತಗೊಂಡಿದ್ದು, ಈ ಪೈಕಿ 205 ಜನವಸತಿಗಳು ಸಿಂಧನೂರು ತಾಲ್ಲೂಕಿನಲ್ಲಿವೆ. ಇಂತಹ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಸಬ್-ಮಿಷನ್ ಕಾರ್ಯಕ್ರಮದಡಿ ತೆಗೆದುಕೊಳ್ಳಲಾಗುತ್ತದೆ. ಸಿಂಧನೂರು ತಾಲ್ಲೂಕಿನಲ್ಲಿ (1) ಬದಕೂಗೂರು ಮತ್ತು ಇತರ 17 ಗ್ರಾಮಗಳು (2) ಗೋರೆಬಾಳ್ ಮತ್ತು ಇತರ 12 ಗ್ರಾಮಗಳು ಮತ್ತು (3) ತುರುವಿಹಾಳ್ ಮತ್ತು ಇತರ 33 ಗ್ರಾಮಗಳು, ಈ 3 ಗುಂಪಿನಲ್ಲಿರುವ ಜನವಸತಿಗಳಿಗೆ (ಕ್ಲಸ್ಟರ್‌ಗಳಿಗೆ) ತುಂಗಭದ್ರಾ ನದಿ / ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರು ಪೂರೈಕೆಗಾಗಿ ಅನುಕ್ರಮವಾಗಿ ರೂ.6.96 ಕೋಟಿ, ರೂ.8.48 ಕೋಟಿ ಮತ್ತು ರೂ.13.18 ಕೋಟಿ ಮೊತ್ತದ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 232(573)

ಸದಸ್ಯರ ಹೆಸರು: ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 67 ಎಸ್.ಇ.ಎಸ್. 2001 ದಿನಾಂಕ 10-07-2001ರಂತೆ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಮೇಲಿನ ಆದೇಶದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ? ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ. (ವಿವರ ನೀಡುವುದು)

ಉತ್ತರ

ಅ) 73.